# ಒಗಟಿಗೆ ಉತ್ತರಿಸಿ

1. ಎರಡು ಮನೆಗೆ ಒಂದೇ ದೀಪ
2. ಕೈಯಲ್ಲಿದ್ದಾಗ ಒಂದು, ಕೈ ಬಿಟ್ಟರೆ ಎರಡು
3. ಐದು ಕೋಣೆಗಳಿಗೆ ಒಂದೇ ಪಡಸಾಲೆ
4. ಕೈಬಿಟ್ಟರೆ ಒಂಟಿ ಕಾಲಿನಲ್ಲಿ ಗಿರಗಿರನೇ ತಿರುಗುತ್ತೇನೆ-
5. ಕುತ್ತಿಗೆ ಇದೆ ಶಿರ ಇಲ್ಲ
6. ಒಂದು ತಟ್ಟೆಯಲ್ಲಿ ನೂರಾರು ನಕ್ಷತ್ರ
7. ರಾತ್ರಿ ರಾಜನಂತೆ ಸವಾರಿ, ಬೆಳಾಗಾದ್ರೆ ಪರಾರಿ
8. ಪೆಟ್ಟಿಗೆ ಒಡೆದು ನೋಡಿದರೆ ಪುಟಾಣಿ ಮಕ್ಕಳು
9. ಕತ್ತಲು ಕೋಣೆಯೊಳಗೆ ಮುತ್ತಿನ ಸಾಲು
10. ಊರೋರಿಗೆಲ್ಲಾ ಒಂದೇ ಕಂಬಳಿ
11. ನೆತ್ತಿಯಲ್ಲಿ ತಿನ್ನುತ್ತೆ ಹೊಟ್ಟೆಯಲ್ಲಿ ಕಾರುತ್ತೆ
12. ಬಾಳಣ್ಣನಿಗೆ ನೂರೊಂದು ಮಕ್ಕಳು
13. ಕಪ್ಪು ಬಣ್ಣ... ಸೂಜಿಯ ಹಾಗೆ ಸಣ್ಣ
14. ಉದ್ದ ಮರದ ಕೆಳಗೆ ನೆರಳಿಲ್ಲ
15. ಒಂದೇ ಕಣ್ಣು, ಒಂದೇ ಬಾಲ
16. ಕೋಟೆ , ಒಳಗೆ ಕೊಳ
17. ಮುಳ್ಳು ಮುಳ್ಳಿನ ಚಕ್ರ, ಆ ಚಕ್ರದೊಳಗೆ ಮುಳ್ಳಿನ ಚಕ್ರ-
18. ಮುಸುಕಿನ ಗಡಿಗೆಯಲ್ಲಿ ಕೆಂಪು ರತ್ನಗಳು ತುಂಬಿವೆ-
19. ಉಂಡೆ ಒಡೆದರೆ ಮನೆ ತುಂಬಾ ಚಿಟ್ಟೆಗಳು
20. ಗಿಡ್ಡ ಗಿಡದಲ್ಲಿ ಗಿಳಿಗಳು ತುಂಬಿವೆ

- ತಂಬಿಗೆ
- ಜರಡಿ
- ಚಂದ್ರ
- ತೆಂಗಿನಕಾಯಿ
- ಮೂಗುತಿ
- ಬುಗುರಿ
- ಅಂಗೈ
- ಆಕಾಶ
- ನೆಲಗಡಲೆ
- ಹಲ್ಲುಗಳು
- ದಾರ
- ಕೂದಲು
- ಎಳನೀರು
- ಚಕ್ಕುಲಿ
- ಬೀಸುವಕಲ್ಲು
- ಬಾಳೆಯ ಗಿಡ
- ಕಡಲೆ ಗಿಡ
- ಬೆಳ್ಳುಳ್ಳಿ.
- ಸೂಜಿ ದಾರ
- ದಾಳಿಂಬೆ ಹಣ್ಣು.

LIVEWORKSHEETS